ರಿ.ನಂ. ಆರ್.ಸಿ.ಎಸ್.1540 ಸ್ಥಾಪನೆ : 08-11-1939 GSTIN : 29AAAJM0788P1ZD

# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ

ಎ.ಪಿ.ಎಂ.ಸಿ. ಪ್ರಾಂಗಣ, ಸಾಗರ ರಸ್ತೆ, ಶಿವಮೊಗ್ಗ-577 204 (ಕರ್ನಾಟಕ)

# The Malnad Areca Marketing Co-Operative Society Ltd.

A.P.M.C. Yard, Sagara Road, Shivamogga-577 204 (Karnataka)

08182-250513/14, 250881 ho@mamcos.info www.mamcos.info

ಮಾಮ್‌ಕೋಸ್/ಕೇ.ಕ/ಕಟ್ಟಡ/ 01 /2025-26 /1234 ದಿನಾಂಕ : 07.11.2025

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಶಿವಮೊಗ್ಗ ಕೋಟೆ ರಸ್ತೆಯಲ್ಲಿರುವ ಸಂಘದ ಕಟ್ಟಡದ ನವೀಕರಣ ಕಾಮಗಾರಿಯನ್ನು ಮಾಡುವ ಬಗೆಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 12.11.2025 ರ ಸಂಜೆ 4.00 ರ ಒಳಗೆ ಮುಚ್ಚಿದ ಲಕೋಟೆಯಲ್ಲಿ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದು. ಹೆಚ್ಚಿನ ವಿವರಗಳಿಗಾಗಿ ಸಂಘದ ವೆಬ್‌ಸೈಟ್ : www.mamcos.info ಗೆ ಭೇಟಿ ನೀಡುವುದು.

1. ಕಟ್ಟಡದ ಮೇಲ್ಛಾವಣಿಗೆ ಶೀಟ್ ಅಳವಡಿಸುವ ಕಾಮಗಾರಿ.
2. ಕಟ್ಟಡದ ಹಳೆಯ ಫಾಲ್ ಸಿಲೀಂಗ್ ತೆಗೆದು ಹೊಸದಾಗಿ ಫಾಲ್ ಸೀಲಿಂಗ್ ಮಾಡಿಕೊಡುವುದು
3. ಕಿಟಕಿಗಳಿಗೆ ಅಲ್ಯೂಮಿನಿಯಂ ಮತ್ತು ಯುಪಿವಿಸಿ ಫ್ರೇಮ್ ಅಳವಡಿಸಿಕೊಡುವುದು.

ಸಹಿ/-

ವ್ಯವಸ್ಥಾಪಕ ನಿರ್ದೇಶಕರು

ಮಾಮ್‌ಕೋಸ್ ನಿ.,ಶಿವಮೊಗ್ಗ

NAME OF WORK :- DETAILED ESTIMATE FOR THE PROPOSED RENOVATION WORK FOR GANGOTHRI COLLEGE AT MAMCOS SHIVAMOGGA DISTRICT .

Schedule - "B"

ALUMINIUM WINDOWS

| Sl. No. | Description of works | Unit | As per Sanctioned Estimate | Rate quoted by the contractor | | Amount |
|---|---|---|---|---|---|---|
| | | | Quantity | Rate in Figures | Rate in words | |
| 1 | 2 | 3 | 4 | 5 | 6 | 7 |
| 1 | Providing and fixing **aluminium** work for doors, **windows**, ventilators and partitions with extruded built up standard tubular sections/ appropriate sections and other sections of approved make conforming to IS: 733 and IS:1285, fixing with dash fasteners of required dia and size, including necessary filling up the gaps at junctions, i.e. at top, bottom and sides with required EPDM rubber/ neoprene gasket etc. Aluminium sections shall be smooth, rust free, straight, mitred and jointed mechanically wherever required including cleat angle, Aluminium snap beading for glazing / paneling, C.P. brass / stainless steel screws, all complete as per architectural drawings and the directions of Engineer-incharge. :For Fixed Portion: **Powder coated aluminium** (minimum thickness of powder coating 50 micron) including cost of materials, labour, usage charges of machinery complete as per specifications. (Vol-II, 2023-24 SR,P-87, I-11.35.1.2) | | | | | |
| | | Kgs | 1152.98 | | | |

ಮಾಮ್‌ಕೋಸ್/ಕೇ.ಕ/ಕಟ್ಟಡ/ 01/ 1234/2025-26 ದಿನಾಂಕ :07-11-2025

**ಶಿವಮೊಗ್ಗ ಕೋಟೆ ರಸ್ತೆಯಲ್ಲಿರುವ ಸಂಘದ ಕಟ್ಟಡದ ಕಿಟಕಿಗಳಿಗೆ ಅಲ್ಯೂಮಿನಿಯಂ ಮತ್ತು ಯುಪಿವಿಸಿ ಫ್ರೇಮ್ ಅಳವಡಿಸುವ ಕಾಮಗಾರಿ ಟೆಂಡರಿಗೆ ಸಂಬಂಧಪಟ್ಟ ನಿಬಂಧನೆಗಳು**

1. ಅರ್ಜಿದಾರರು ಟೆಂಡರ್ ಕರೆದ ಕಾಮಗಾರಿಯಂತಹ ಕಾಮಗಾರಿಗಳನ್ನು ದಕ್ಷತೆಯಿಂದ ನಿರ್ವಹಿಸಿದ ಅನುಭವ ಇರತಕ್ಕದ್ದು.
2. ಟೆಂಡರ್‌ನಲ್ಲಿ ಭಾಗವಹಿಸಿದ ಬಿಡ್ ದಾರರುಗಳ ಪೈಕಿ ಯಶಸ್ವಿ ಬಿಡ್ ದಾರರು ಬಿಡ್ ಮಾಡಿದ/ಒಪ್ಪಿಕೊಂಡ ಅಂತಿಮ ಮೊತ್ತಕ್ಕೆ ನಿಯಮಾನುಸಾರ ಛಾಪಕಾಗದದಲ್ಲಿ ಒಪ್ಪಂದ ಕರಾರು ಪತ್ರವನ್ನು ಮಾಡಿಕೊಳ್ಳತಕ್ಕದ್ದು. ಛಾಪಕಾಗದದ ಮೊತ್ತವನ್ನು ಯಶಸ್ವಿ ಬಿಡ್ದಾರರು ಭರಿಸತಕ್ಕದ್ದು
3. ಶಿವಮೊಗ್ಗ ಕೋಟೆ ರಸ್ತೆಯಲ್ಲಿರುವ ಕಟ್ಟಡದ ಕಿಟಕಿಗಳಿಗೆ ಅಲ್ಯೂಮಿನಿಯಂ ಫ್ರೇಮ್ ಮತ್ತು ಯಪಿವಿಸಿ ಅಳವಡಿಕೆ ಕಾಮಗಾರಿಯನ್ನು ನಿರ್ವಹಿಸುವುದು ಹಾಗೂ ಯಾವುದೇ ಸಾಗಾಣಿಕೆ ವೆಚ್ಚ / ಪ್ರಯಾಣದ ಭತ್ಯೆಗಳಾಗಲಿ ಮತ್ತು ಇತರೆ ಹೆಚ್ಚುವರಿ ಮಜೂರಿಯಾಗಲಿ ಸಂಘದಿಂದ ಪಾವತಿಸುವುದಿಲ್ಲ. ಹಾಗೂ ಕಾಮಗಾರಿಗೆ ಅಗತ್ಯ ಇರುವ ವಿದ್ಯುತ್ ಸಂಪರ್ಕವನ್ನು ನೀಡಲಾಗುವುದಿಲ್ಲ. ಆದರೆ ಗುತ್ತಿಗೆದಾರರೇ ಈ ಕಾಮಗಾರಿಗೆ ಅಗತ್ಯವಿರುವ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಮೇಸ್ಕಾಂ ಕಛೇರಿಯಿಂದ ಮಂಜೂರು ಮಾಡಿಸಿಕೊಳ್ಳತಕ್ಕದ್ದು.
4. ಗುತ್ತಿಗೆದಾರರು ಈ ಹಿಂದೆ ಯಾವುದೇ ಕಾಮಗಾರಿಗಳನ್ನು ಪೂರ್ಣಗೊಳಿಸದೇ ಇರುವ ಬಗ್ಗೆ ಹಾಗೂ ಸಕಾರಣವಿಲ್ಲದೆ ಯಾವುದೇ ಕಾಮಗಾರಿಗಳನ್ನು ವಿಳಂಬವಾಗಿ ಪೂರ್ಣಗೊಳಿಸಿರದ ಬಗ್ಗೆ ಸ್ವಯಂ ದೃಢೀಕರಣ ಸಲ್ಲಿಸತಕ್ಕದ್ದು.
5. ಟೆಂಡರ್‌ನಲ್ಲಿ ನಮೂದಿಸಿರುವ (ಟೆಂಡರ್ ಫಾರಂನಲ್ಲಿ ನಮೂದಿಸಿದಂತೆ) ಕಾಮಗಾರಿ ಹೊರತುಪಡಿಸಿ, ಹೆಚ್ಚುವರಿ ಬೇರೆ ಕಾಮಗಾರಿಯನ್ನು ಸಂಘದ ಅನುಮತಿಯಿಲ್ಲದೆ ಮಾಡಿದ ಪಕ್ಷದಲ್ಲಿ ಸಂಘವು ಜವಾಬ್ದಾರರಲ್ಲ. ಹಾಗೆಯೇ ಹೆಚ್ಚುವರಿ ಕಾಮಗಾರಿ ಆವಶ್ಯಕತೆ ಇದ್ದ ಪಕ್ಷದಲ್ಲಿ ಸಂಘದ ಕೇಂದ್ರ ಕಛೇರಿಯಿಂದ ಅನುಮತಿಯನ್ನು ಪಡೆಯತಕ್ಕದ್ದು.
6. ಈ ಕಾಮಗಾರಿಯನ್ನು ಪ್ರಾರಂಭ ಮಾಡುವ ಮುನ್ನ ಯಾವುದೇ ಮುಂಗಡ ಮೊತ್ತವನ್ನು ಪಾವತಿಸಲಾಗುವುದಿಲ್ಲ. ಹಾಗೂ ಈ ಕಾಮಗಾರಿಯ ಒಟ್ಟಾರೆ ಬಿಲ್ ಮೊಬಲಗನ್ನು ಎರಡು (2) ಹಂತದಲ್ಲಿ ಪಾವತಿಸಲಾಗುವುದು. ಸಂಘದ ತಾಂತ್ರಿಕ ಸಲಹೆಗಾರರು ಕಾಮಗಾರಿಯನ್ನು ಪರಿಶೀಲಿಸಿ, ದೃಢೀಕರಿಸಿದ ಬಿಲ್ ಬಾಬ್ತು ಪಾವತಿಸಲಾಗುವುದು.( ಟಿ.ಡಿ.ಎಸ್ ಸೇರಿದಂತೆ ಅನ್ವಯಿಸಿರುವ ಸರ್ಕಾರ ನಿಗದಿಪಡಿಸುವ ಇನ್ನಿತರೇ ಯಾವುದೇ ತೆರಿಗೆ ಅನ್ವಯವಾದಲ್ಲಿ ಅದನ್ನು ಕಟಾಯಿಸಲಾಗುವುದು.)

7. ಕಾಮಗಾರಿ ಮುಗಿದ ಬಳಿಕ ಹನ್ನೆರಡು ತಿಂಗಳ ಕಾಮಗಾರಿಯ ನಿರ್ವಹಣಾ ಅವಧಿಯಲ್ಲಿ ಏನಾದರು ದೋಷ ಕಂಡುಬಂದಲ್ಲಿ ಅದನ್ನು ನಿಮ್ಮ ಸ್ವಂತ ಖರ್ಚಿನಲ್ಲಿ ದುರಸ್ತಿ ಮಾಡತಕ್ಕದ್ದು ಅಥವಾ ದುರಸ್ತಿ ಮಾಡಲು ಸಾಧ್ಯವಾಗದ ಸ್ಥಿತಿಯಲ್ಲಿ ಇದ್ದಲ್ಲಿ ಅದನ್ನು ಹೊಸದಾಗಿ ಅಳವಡಿಸುವುದು ಹಾಗೂ ವಾರಂಟಿ & ಗ್ಯಾರಂಟಿಗಳ ಬಗೆಗೆ ದೃಢೀಕೃತ ಪತ್ರವನ್ನು ನೀಡತಕ್ಕದ್ದು,

8. ಟೆಂಡರ್ ಹಾಕಬಯಸುವ ಗುತ್ತಿಗೆದಾರರು ಈ ಕಾಮಗಾರಿಗೆ ಅವಶ್ಯವಿರುವ ಎಲ್ಲಾ ಯಂತ್ರೋಪಕರಣ ಮತ್ತು ಸಲಕರಣೆಗಳನ್ನು ಹೊಂದಿರತಕ್ಕದ್ದು, (ಸಲಕರಣೆಗಳಿಗೆ ಸಂಘದಿಂದ ಯಾವುದೇ ಬಾಡಿಗೆ ನೀಡುವುದಿಲ್ಲ).

9. ಗುತ್ತಿಗೆದಾರರ ಮೂರು ವರ್ಷದ ವಹಿವಾಟಿನ ದೃಢೀಕೃತ ವಿವರಗಳನ್ನು ಸಲ್ಲಿಸುವುದು. ಹಾಗೆಯೇ ಹಿಂದಿನ ಒಂದು ವರ್ಷದ ವಾರ್ಷಿಕ ವಹಿವಾಟು ಕನಿಷ್ಠ ಅಂದರೆ ಕಿಟಕಿಗಳಿಗೆ ಅಲ್ಯೂಮಿನಿಯಂ ಫ್ರೇಮ್ ಮತ್ತು ಯುಪಿವಿಸಿ ಅಳವಡಿಸುವ ಕಾಮಗಾರಿಗೆ ರೂ.8 ಲಕ್ಷ ಮೊತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಹಾಗೆಯೇ, ಕಾಮಗಾರಿ ನಿರ್ವಹಿಸಿರುವುದಕ್ಕೆ ಕಾಮಗಾರಿ ದೃಢೀಕರಣ ಪತ್ರವನ್ನು ಲಗತ್ತಿಸುವುದು.

10. ಈ ಕಾಮಗಾರಿಯು ಪ್ರಗತಿಯಲ್ಲಿರುವ ಸಮಯದಲ್ಲಿ ಸಂಘದ ತಾಂತ್ರಿಕ ಸಲಹೆಗಾರರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಭೇಟಿ ನೀಡಿದಾಗ ಕಾಮಗಾರಿಯ ಬಗೆಗೆ ನಿರ್ದೇಶನ ನೀಡಿದಲ್ಲಿ ಆ ಕಾಮಗಾರಿಯನ್ನು ನಿರ್ವಹಿಸತಕ್ಕದ್ದು ಮತ್ತು ಸೂಚಿಸಿರುವ ಗುಣಮಟ್ಟ ಮತ್ತು ಪರಿಮಾಣಗಳು ವ್ಯತ್ಯಾಸವಾಗಿರುವ ಬಗೆಗೆ ಇವರು ಪರಿಶೀಲಿಸಿ ಅಗತ್ಯವಾದಲ್ಲಿ/ಬದಲಾವಣೆಯ ಅಗತ್ಯಕ್ಕೆ ತಕ್ಕಂತೆ ದುರಸ್ತಿ ಮಾಡತಕ್ಕದ್ದು, ಈ ರೀತಿ ಆದಂತಹ ವ್ಯತ್ಯಾಸಕ್ಕೆ ಹೆಚ್ಚುವರಿ ಮೊಬಲಗನ್ನು ಪಾವತಿಸಲಾಗುವುದಿಲ್ಲ.

11. ಈ ಕಾಮಗಾರಿಯ ನಿರ್ವಹಣೆಗೆ ಕಾರ್ಯಾದೇಶ ನೀಡಿದ ದಿನಾಂಕದಿಂದ ಕಟ್ಟಡದ ಕಿಟಕಿಗಳಿಗೆ ಅಲ್ಯೂಮಿನಿಯಂ ಫ್ರೇಮ್ ಮತ್ತು ಯುಪಿವಿಸಿ ಅಳವಡಿಸುವ ಕಾಮಗಾರಿಗೆ ಒಂದು ತಿಂಗಳ ಅವಧಿಯಲ್ಲಿ ಸಂಪೂರ್ಣ ಮುಗಿಸತಕ್ಕದ್ದು, ಹಾಗೆಯೇ ಈ ಕಾಮಗಾರಿಯು ಸಂಪೂರ್ಣ ಮುಗಿಸಲು ಸಕಾರಣವಿಲ್ಲದೆ ವಿಳಂಬವಾದ ಪಕ್ಷದಲ್ಲಿ ನಿಮಗೆ ಪಾವತಿಸುವ ಬಿಲ್‌ನ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ಸಂಘದ ಆಡಳಿತ ಮಂಡಲಿಗೆ ಇರುತ್ತದೆ.

12. ಟೆಂಡರ್ ಫಾರಂನಲ್ಲಿ ನಮೂದಿಸಿರುವ ಕಂಪನಿಗಳ (ಬ್ರಾಂಡ್) ಸಾಮಗ್ರಿಗಳನ್ನು ಮಾತ್ರ ಕಾಮಗಾರಿಗಳಿಗೆ ಉಪಯೋಗಿಸಿ, ಕಾಮಗಾರಿಗಳಿಗೆ ಬೇಕಾದ ಸಾಮಗ್ರಿಗಳನ್ನು ಉದ್ದೇಶಗಳಿಗನುಸಾರವಾದ ಈ ಕಾಮಗಾರಿಗಳಿಗೆ ಬೇಕಾಗುವ ಎಲ್ಲಾ ಸಾಮಾಗ್ರಿಗಳನ್ನು ಗುತ್ತಿಗೆದಾರರು ಸ್ವಂತ ಖರ್ಚಿನಲ್ಲಿ ತಂದು ಗುಣ ಮಟ್ಟದ ಬಗ್ಗೆ ದೃಢೀಕರಿಸಿ ಅಳವಡಿಸುವುದು. ಸಂಘದಿಂದ ಯಾವುದೇ ಸಾಮಗ್ರಿಗಳನ್ನು ಸರಬರಾಜು ಮಾಡಲಾಗುವುದಿಲ್ಲ.

13. ಈ ಕಾಮಗಾರಿಯು ನಿರ್ವಹಿಸುವ ಅವಧಿಯಲ್ಲಿ ಯಾವುದೇ ಅನಾಹುತವಾದಲ್ಲಿ ಟೆಂಡರ್‌ದಾರರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಸಂಘಕ್ಕೆ ಯಾವುದೇ ಹೊಣೆಗಾರಿಕೆ ಇರುವುದಿಲ್ಲ.

14. ಈ ಕಾಮಗಾರಿಯ ಟೆಂಡರ್ ಕುರಿತಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಕೇಂದ್ರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು. ಹಾಗೂ ಟೆಂಡರ್ ಹಾಕುವ ಸಮಯ ಸಾರ್ವಜನಿಕ ರಜಾ ದಿನವಾದಲ್ಲಿ ಮರುದಿನ ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು.

15. ಅರ್ಜಿದಾರರು ಜಿ.ಎಸ್.ಟಿ. ಪ್ರಮಾಣ ಪತ್ರದ ದೃಢೀಕೃತ ನಕಲು ಪ್ರತಿ ಸಲ್ಲಿಸುವುದು. ಹಾಗೂ ಈ ಟೆಂಡರ್ ಬಾಬು ಜಿ.ಎಸ್.ಟಿ.ಯನ್ನು ಒಳಗೊಂಡು ಟೆಂಡರ್ ಫಾರಂಗಳಲ್ಲಿ ನಮೂದಿಸುವುದು. ಪಾನ್ ಕಾರ್ಡ್ ದೃಢೀಕೃತ ನಕಲು ಮತ್ತು ಬ್ಯಾಂಕ್ ಖಾತೆ ವಿವರಗಳ ದಾಖಲೆಗಳನ್ನು ಸಲ್ಲಿಸುವುದು.

**ಅಂದಾಜು ವೆಚ್ಚಕ್ಕೆ ಇ.ಎಂ.ಡಿ ಪಡೆಯುವ ವಿವರ**

| ಕ್ರ.ಸಂ | ಅಂದಾಜು ಮೊತ್ತ | ಇ.ಎಂ.ಡಿ ಶೇ | ಇ.ಎಂ.ಡಿ ಮೊತ್ತ ಕನಿಷ್ಠ | ಎಫ್.ಎಸ್.ಡಿ ಮೊತ್ತ ಶೇ |
|---|---|---|---|---|
| 1 | 20 ಲಕ್ಷದ ವರೆಗೆ | 2.5% | 45 ಸಾವಿರ | 5% |
| 2 | 20 ಲಕ್ಷದಿಂದ 1 ಕೋಟಿ | 2% | 50 ಸಾವಿರ | 5% |
| 3 | 1 ಕೋಟಿ ಯಿಂದ 10 ಕೋಟಿ | 1.5% | 2 ಲಕ್ಷ | 5% |
| 4 | 10 ಕೋಟಿ ಮೇಲೆ | 1% | 15 ಲಕ್ಷ | 5% |

ಕರಾರು ಪತ್ರಕ್ಕೆ ಸ್ಟ್ಯಾಂಪ್ ಪೇಪರ್ ಪಡೆಯುವ ವಿವರಗಳು

ಅಂತಿಮ ಗೊಳಿಸಿದ ಟೆಂಡರ್ ಮೊತ್ತಕ್ಕೆ 0.01% ರಷ್ಟು ಕರಾರು ಪತ್ರ ಪಡೆಯುವುದು

ಉದಾ: 20 ಲಕ್ಷದವರೆಗಿನ ಅಂತಿಮ ಮೊತ್ತಕ್ಕೆ ₹ 200/- ಗಳ ಛಾಪಾ ಕಾಗದ ಪಡೆಯುವುದು.

ರಿ.ನಂ. ಆರ್.ಸಿ.ಎಸ್.1540 ಸ್ಥಾಪನೆ : 08-11-1939 GSTIN : 29AAAJM0788P1ZD

ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ

ಎ.ಪಿ.ಎಂ.ಸಿ. ಪ್ರಾಂಗಣ, ಸಾಗರ ರಸ್ತೆ, ಶಿವಮೊಗ್ಗ-577 204 (ಕರ್ನಾಟಕ)

The Malnad Areca Marketing Co-Operative Society Ltd.

A.P.M.C. Yard, Sagara Road, Shivamogga-577 204 (Karnataka)

08182-250513/14, 250881 ho@mamcos.info www.mamcos.info

building.homamcos@gmail.com

**ಮಾಮ್‌ಕೋಸ್/ಕೇ.ಕ/ಕಟ್ಟಡ/ 01 / 1234 /2025-26** **ದಿನಾಂಕ:07.11.2025**

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಕಾಮಗಾರಿಯನ್ನು ಶಿವಮೊಗ್ಗ ಕೋಟೆ ರಸ್ತೆಯಲಿರುವ ಸಂಘದ ಕಟ್ಟಡದ ಮೇಲ್ಛಾವಣಿಗೆ ಕಬ್ಬಿಣದ ಫ್ರೇಮ್ ಜೊತೆ ಜೆ.ಎಸ್.ಡಬ್ಲ್ಯೂ ಶೀಟ್ ಅಳವಡಿಸುವ ಕಾಮಗಾರಿ, ಹೊಸ ಫಾಲ್ ಸೀಲಿಂಗ್ ಅಳವಡಿಸುವ ಕಾಮಗಾರಿಗೆ ಮತ್ತು ಕಟ್ಟಡದ ಕಿಟಕಿಗಳಿಗೆ ಅಲ್ಯೂಮಿನಿಯಂ ಮತ್ತು ಯುಪಿವಿಸಿ ಫ್ರೇಮ್ ಅಳವಡಿಸುವ ಕಾಮಗಾರಿ ಗುತ್ತಿಗೆದಾರರಿಂದ ಈ ಕೆಳಕಂಡ ಕೆಲಸಕ್ಕೆ ನಿಗದಿತ ನಮೂನೆಯಲ್ಲಿ ಮೊಹರಾದ ಮುಚ್ಚಿದ ಲಕೋಟೆಯ ಮೇಲೆ ಕೆಲಸದ ಹೆಸರನ್ನು ಬರೆದಿರುವ ಐಟಂ ದರದ ಟೆಂಡರ್‌ನ್ನು ದ್ವಿಪತ್ರಿಗಳಲ್ಲಿ ಸ್ವೀಕರಿಸಲಾಗುವುದು, ಯಾವುದೇ ಅಥವಾ ಎಲ್ಲಾ ಟೆಂಡರ್‌ಅನ್ನು ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಸಂಘವು ಕಾಯ್ದಿರಿಸಿಕೊಂಡಿದೆ.

ಟೆಂಡರ್ ಫಾರಂಗೆ ಅರ್ಜಿಯನ್ನು ಸ್ವೀಕರಿಸುವುದನ್ನು ಹಾಗೂ ಖಾಲಿ ಫಾರಂಗಳನ್ನು ನೀಡುವುದನ್ನು ಸಂಘದ ಕೇಂದ್ರ ಕಛೇರಿಯಲ್ಲಿ ಮಾತ್ರ ನಿರ್ವಹಿಸಲಾಗುವುದು. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ನಿಗದಿತ ದಿನಾಂಕ ಮತ್ತು ಸಮಯದಂದು ಕೇಂದ್ರ ಕಛೇರಿಯಲ್ಲಿ ಮಾತ್ರ ಸ್ವೀಕರಿಸಲಾಗುವುದು. ಟೆಂಡರ್ ಫಾರಂ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ನಿಗದಿಪಡಿಸಿದ ಇ.ಎಂ.ಡಿ ಮೊತ್ತವನ್ನು MAMCOS LTF, SHIVAMOGGA ಹೆಸರಿನಲ್ಲಿ ಡಿ.ಡಿ ಮೂಲಕ/ಯೂನಿಯನ್ ಬ್ಯಾಂಕ್, ಬಿ.ಹೆಚ್ ರಸ್ತೆ ಶಿವಮೊಗ್ಗ ಶಾಖೆಯಲ್ಲಿರುವ ಸಂಘದ ಉಳಿತಾಯ ಖಾತೆ ನಂ.520101215254046 IFSC CODE: UBIN0900061 ಕ್ಕೆ ಪಾವತಿ ಮಾಡತಕ್ಕದ್ದು, ನಿಬಂಧನೆಗಳು ಹಾಗೂ ಇತರೆ ವಿವರಗಳನ್ನು ಸಂಘದ ಕೇಂದ್ರ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

| ಕ್ರ. ಸಂ | ಕಾಮಗಾರಿಯ ವಿವರಗಳು | ಅಂದಾಜು ವೆಚ್ಚ | ಇ.ಎಂ.ಡಿ ಮೊತ್ತ | ಗುತ್ತಿಗೆದಾರರು | ಟೆಂಡರ್ ಫಾರಂ ಮೊತ್ತ | ಕಾಮಗಾರಿಗಳನ್ನು ಮುಗಿಸಲು | ಟೆಂಡರ್ ಫಾರಂಗಳಿಗೆ ಅರ್ಜಿಯನ್ನು | ಖಾಲಿ ಟೆಂಡರ್ ಫಾರಂ | ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು |
|---|---|---|---|---|---|---|---|---|---|

| | | ಮತ್ತು ವಿಸ್ತೀರ್ಣ | (ರೂಗಳ ಲ್ಲಿ) | | (ರೂ.ಗಳಲ್ಲಿ) + ಜಿ.ಎಸ್.ಟಿ | ನಿಗದಿಪಡಿಸಿದ ಕಾಲಾವಧಿ | ಸ್ವೀಕರಿಸುವ ದಿನಾಂಕ ಸಂಜೆ 4.00 ವರೆಗೆ | ಕೊಡುವ ದಿನಾಂಕ ಸಂಜೆ 4.00 ರವರೆಗೆ | ಸ್ವೀಕರಿಸುವ ಕೊನೆಯ ದಿನಾಂಕ ಸಂಜೆ 4.00 ರವರೆಗೆ |
|---|---|---|---|---|---|---|---|---|---|
| 1 | ಕಟ್ಟಡದ ಮೇಲ್ಹಾವಣಿಗೆ ಕಬ್ಬಿಣದ ಫ್ರೇಮ್ ಜೊತೆ ಜಿ.ಎಸ್.ಡಬ್ಲ್ಯೂ ಶೀಟ್ ಅಳವಡಿಸುವುದು | 18.94 ಲಕ್ಷಗಳು<br>1758.41 sqm | 47,350.00 | ಸಿವಿಲ್ ಕಾಮಗಾರಿಯ ಗುತ್ತಿಗೆದಾರರು/ ಫ್ಯಾಬ್ರಿಕೇಟರ್ ಅಳವಡಿಸುವವರು | 500.00<br>90.00<br>590.00 | 30 ದಿವಸಗಳು | 11.11.2025 | 11.11.2025 | 12.11.2025 |
| 2 | ಹೊಸ ಫಾಲ್ ಸೀಲಿಂಗ್ ಅಳವಡಿಸುವುದು | 7.67 ಲಕ್ಷಗಳು<br>345.93 sqm | 19,200.00 | ಸಿವಿಲ್ ಕಾಮಗಾರಿಯ ಗುತ್ತಿಗೆದಾರರು/ ಫ್ಯಾಬ್ರಿಕೇಟರ್ ಅಳವಡಿಸುವವರು | 500.00<br>90.00<br>590.00 | 30 ದಿವಸಗಳು | 11.11.2025 | 11.11.2025 | 12.11.2025 |
| 3 | ಕಿಟಕಿಗಳಿಗೆ ಅಲ್ಯೂಮಿನಿಯಂ ಮತ್ತು ಯುಪಿವಿಸಿ ಫ್ರೇಮ್ ಅಳವಡಿಸುವುದು | 7.05 ಲಕ್ಷಗಳು<br>1152.98 Sqm | 17,600.00 | ಸಿವಿಲ್ ಕಾಮಗಾರಿಯ ಗುತ್ತಿಗೆದಾರರು/ ಫ್ಯಾಬ್ರಿಕೇಟರ್ ಅಳವಡಿಸುವವರು | 500.00<br>90.00<br>590.00 | 30 ದಿವಸಗಳು | 11.11.2025 | 11.11.2025 | 12.11.2025 |

ಸಹಿ/-

ವ್ಯವಸ್ಥಾಪಕ ನಿರ್ದೇಶಕರು